## 5. ಅಧ್ಯಕ್ಷರ ಅಪ್ಪಣೆ ಮೇರೆಗೆ

*(1) ಮಡಿಕೇರಿ ತಾಲ್ಲೂಕಿನ ಎರಡನೇ ಪೊನ್ನಂಗೇರಿ ಗ್ರಾಮಕ್ಕೆ ಸೇರಿದ ಸುಮಾರು 20 ಎಕರೆ ಸರ್ಕಾರಿ ಜಾಗದಲ್ಲಿ ಮರಗಳನ್ನು ಲೂಟಿ ಮಾಡಿರುವುದು.*

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:— ಮಾನ್ಯ ಅಧ್ಯಕ್ಷರೇ, ನಾನು ಆಹಾರ ಪೂರೈಕೆ ಮಂತ್ರಿಗಳನ್ನು ಭೇಟಿ ಮಾಡಿದೆ. ಅವರು ವಿಚಾರಣೆ ಮಾಡುತ್ತೇವೆಂದು ಈಗಾಗಲೇ ಉತ್ತರ ಕೊಟ್ಟುಬಿಟ್ಟಿದ್ದಾರೆ. ಆದ್ದರಿಂದ ಈಗ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಕೇಳುತ್ತೇನೆ. ಮಡಿಕೇರಿ ತಾಲ್ಲೂಕಿನ ಎರಡನೇ ಪೊನ್ನಂಗೇರಿ ಗ್ರಾಮಕ್ಕೆ ಸೇರಿದ ಸುಮಾರು 20ಎಕರೆ ಸರ್ಕಾರಿ ಜಾಗದಲ್ಲಿ ಮರಗಳನ್ನು ಲೂಟಿ ಮಾಡಿದ್ದಾರೆ. ಇದರಲ್ಲಿ ಬಹಳ ಪ್ರಭಾವಿ ವ್ಯಕ್ತಿಯ ಕೈವಾಡ ಕೂಡ ಇದೆ. ಯಾವರೀತಿ ಮರ ಲೂಟಿ ಮಾಡಿದ್ದಾರೆಂದು ಹೇಳಿದರೆ, ಅರಣ್ಯ ಅಧಿಕಾರಿಗಳೂ ಕೂಡ ಅದರಲ್ಲಿ ಶಾಮೀಲಾಗಿದ್ದಾರೆ. ನಮ್ಮ ಮಾಜಿ ಶಾಸಕರೊಬ್ಬರ ಹೆಸರನ್ನು ಹೇಳಬೇಕೆಂದರೂ ಹೇಳುತ್ತೇನೆ. ಆ ಮಡಿಕೇರಿ ತಾಲ್ಲೂಕಿನ ಪೊನ್ನಂಗೇರಿ ಗ್ರಾಮಕ್ಕೆ ಸೇರಿದ ಆ ಜಾಗದ ಹತ್ತಿರ ಬೇರೆಯವರ ಕಡೆಯಿಂದ ಮಾಜಿ ಶಾಸಕರು 4 ಎಕರೆ 31 ಸೆಂಟ್ ಜಾಗವನ್ನು ಪಡೆದುಕೊಂಡು, ಅದರ ಹತ್ತಿರದಲ್ಲಿದ್ದಂಥ ಫೈಸಾರಿ ಜಾಗದಲ್ಲಿ ಸುಮಾರು 30 ಲಕ್ಷ ರೂಪಾಯಿಗಳ ಮರವನ್ನು ಲೂಟಿ ಮಾಡಿದ್ದಾರೆ. ಈ ರೀತಿ ಲೂಟಿ ಮಾಡುವಂಥ ಸಂದರ್ಭದಲ್ಲಿ ಅಲ್ಲಿಯ ಅರಣ್ಯ ಅಧಿಕಾರಿ ಯಾರಿದ್ದಾರೆ, ರೇಂಜ್ ಫಾರೆಸ್ಟ್ ಆಫೀಸರ್ ಮತ್ತು ಎ.ಸಿ.ಎಫ್.ರವರೂ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಮರವನ್ನು ಕಡಿದ ನಂತರ, ನಾಮಕಾವಸ್ಥೆಗೆ ಹೋಗಿ ಆ ಮರವನ್ನು ಆಕ್ಷನ್ ಮಾಡುವ ರೀತಿಯಲ್ಲಿ ಆಕ್ಷನ್ ಕೂಡ ಮಾಡಿದ್ದಾರೆ. ಈ ರೀತಿ ಮಾಡಿ ಯಾರು ಮರವನ್ನು ಕಡಿದಿದ್ದಾರೆ. ಅವರಿಗೇ ಆಕ್ಷನ್ ನಲ್ಲಿ 1 ಲಕ್ಷ 45 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಅದಾದನಂತರ ಪುನಃ ಅವರು ಮರ ಕಡಿಯುವುದನ್ನು ಶುರು ಮಾಡುತ್ತಾರೆ. ನನಗೆ ತಿಳಿದಹಾಗೆ ಸುಮಾರು 200ಬೆಲೆ ಬಾಳುವ ಮರಗಳನ್ನು ಕಡಿದಿದ್ದಾರೆ. ಈ ರೀತಿ ಕಡಿದಂಥ ಮರಗಳನ್ನು ಎರಡನೇ ಸಾರಿಗೆ ಈಗ ಬಂದಿರುವಂಥ ಆರ್.ಎಫ್.ಓ.ಯಾರಿದ್ದಾರೆ ಅವರು ಆ ಮರಗಳನ್ನು ಸೀಜ್ ಮಾಡಿ ಅರಣ್ಯ ಇಲಾಖೆಗೆ ತೆಗೆದುಕೊಂಡು ಹೋಗಿದ್ದಾರೆ. ಆದರೆ, ಮೊದಲು ಆಕ್ಷನ್ ಮಾಡಿದ ಮರಗಳು ಎಷ್ಟಿದೆ ಅದು 30 ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು ಇದ್ದರೂ ಕೂಡ ಅದನ್ನು 1 ಲಕ್ಷ 45 ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ಈ ರೀತಿ ಹಣ ಲೂಟಿಯನ್ನು ಮಾಡಿದ್ದಾರೆ. ಲೂಟಿ ಮಾಡುವಂಥ ಸಂದರ್ಭದಲ್ಲಿ ಅಲ್ಲಿಯ ಮಾಜಿ ಶಾಸಕರು ಯಾರಿದ್ದಾರೆ, ಅವರು ಆ ಫಾರೆಸ್ಟ್‌ನಲ್ಲಿದ್ದ ಮರಗಳನ್ನೂ ಕಡಿದಿದ್ದಾರೆ. ಇದರಲ್ಲಿ ನೇರವಾಗಿ ಫಾರೆಸ್ಟ್ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ. ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಯಾರು ಮರವನ್ನು ಕಡಿದಿದ್ದಾರೆ, ಆ ಮಾಜಿ ಶಾಸಕರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ನಾಮಕಾವಸ್ಥೆಗೆ ಎಫ್.ಐ.ಆರ್. ಹಾಕಿ, ಇಷ್ಟರವರೆಗೆ ಯಾರನ್ನೂ ಕೂಡ ಬಂಧಿಸುವಂಥ ಕಾರ್ಯಕ್ರಮ ಹಾಕಿಲ್ಲ. ಅದಕ್ಕೆ ಸಂಬಂಧಪಟ್ಟ ಫೋಟೋಗಳು ನನ್ನ ಹತ್ತಿರ ಇವೆ. ಈ ರೀತಿ ಮರ ಲೂಟಿ ಮಾಡಿದ್ದರೂ ಸಹ ರೆವಿನ್ಯೂ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ಕೂತಿರುವುದು ಬಹಳ ತಪ್ಪಾಗಿದೆ. ಇದಕ್ಕೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಮತ್ತು ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ, ನನ್ನ ಹತ್ತಿರ ಇರುವ ಕೆಲವು ಮಾಹಿತಿಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :— ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ, ಸಂಬಂಧಪಟ್ಟ ಮಾನ್ಯ ಸಚಿವರು ಬಂದ ಮೇಲೆ ನಾವು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ.

MR. SPEAKER :— You must send a written reply to them.

*(ii) ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಅಥಣಿ ತಾಲ್ಲೂಕಿನ ಕಾಗವಾಡ ಕ್ಷೇತ್ರದ ಹಳ್ಳಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದು.*

ಶ್ರೀ ಶಹಜಹಾನ್ ಇ. ಡೊಂಗರಗಾವ್ :— ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರ ಗಡಿಭಾಗದಲ್ಲಿರುವ ಅಥಣಿ ತಾಲ್ಲೂಕಿನ ಕಾಗವಾಡ ಮತಕ್ಷೇತ್ರದಲ್ಲಿ ಬರುವ ಆರು ಹಳ್ಳಿಗಳು ಮತ್ತು ಅಥಣಿ ಮತಕ್ಷೇತ್ರದಲ್ಲಿ ಬರುವ 22 ಹಳ್ಳಿಗಳ ಪರಿಸ್ಥಿತಿ ಬಹಳ ದಯನೀಯವಾಗಿದೆ. ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ, ಅವುಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸೇರಿಸಿ, ಇಲ್ಲವೇ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಂದು ಕಳೆದ ಎಂಟು-ಹತ್ತು ದಿನಗಳಿಂದ ಅಲ್ಲಿರುವ ಜನರು ಒತ್ತಾಯ ಮಾಡುತ್ತಿದ್ದಾರೆ. ಆ ಭಾಗದಲ್ಲಿ ಈಗಾಗಲೇ ನಮ್ಮ ಜಿಲ್ಲಾ ಮಂತ್ರಿಗಳು, ಬೆಳಗಾಂ ಭಾಗದ ಲೋಕಸಭಾ ಸದಸ್ಯರು ಹಾಗೂ ಆ ಗಡಿ ಭಾಗದ ಮುಖಂಡರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಈ ವಿಷಯಕ್ಕೆ ಸಂಬಂಧಪಟ್ಟಂತೆ 6.4.2000ರಂದು ಒಂದು ವಿಶೇಷ ಸಭೆ ಕರೆದು ವಿಚಾರಮಾಡಿ ಅಲ್ಲಿ ಅವಶ್ಯಕವಾಗಿ ಆಗಬೇಕಾದ ಕಾಮಗಾರಿಗಳ ಬಗ್ಗೆ ಸರ್ಕಾರಕ್ಕೆ ಒಂದು ವರದಿ ಸಲ್ಲಿಸಿದ್ದಾರೆ. ಅದಲ್ಲದೆ 26.4.2000 ರಂದೂ ಸಹ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ವಿಶೇಷ ಸಭೆ ಕರೆದು ಆ ಭಾಗದಲ್ಲಿ ಅವಶ್ಯಕವಾಗಿ ಆಗಬೇಕಾಗಿರುವ ಕಾರ್ಯಗಳ ಕುರಿತು ಸಮಾಲೋಚನೆ ಮಾಡಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಈ ಭಾಗದ ಜನರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯ ಮಾಡುತ್ತಿದ್ದೇನೆ; ಕಾಗವಾಡ ಉಪ ಚುನಾವಣೆಯಲ್ಲಿ ಬಂದಂತಹ ಎಲ್ಲ ಮುಖಂಡರು ಆ ಭಾಗದ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿದ್ದಾರೆ. ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ತಮ್ಮ ಭಾಷಣದಲ್ಲಿ ಈ ಕುರಿತು ಹೇಳಿದ್ದರು. ಆ ಭಾಗದಲ್ಲಿ ಸರಿಯಾದ